‘ಅಲಾ ಒಂದ್ ಸುದ್ದಿಯಿಲ್ಲಲಾ ಮಾರಾಯ ನಿಂದು! ನಿನ್ ಬಗ್ಗೆ ಚಿಕ್ಕಮ್ಮ ಹೇಳೂದಷ್ಟೇ ಕೇಳೂದಾಯ್ತು. ಈಗ್ ನೋಡಿದ್ರೆ, ಹೇಳ್ಕೆ ಮಾಡ್ಲಿಕ್ಕೇ ಬಂದಂಗೆ ಕಾಣುತೆ ಕಣೇ.’

ಶಿವ್ರಾಮನ ಮಾತು ಕೇಳಿ ಶ್ರೀಪಾದನಿಗೆ ಗಂಟಲಿನಲ್ಲಿ ಏನೋ ಸಿಕ್ಕಿ ಹಾಕಿಕೊಂಡಂತಾಯಿತು. ಅವನು ಪ್ರತಿ ಬಾರಿ ಬರುವಂತೆಯೇ ಒಂದೆರಡು ದಿನಕ್ಕೆ ವೈದೇಹಿಯನ್ನು ನೋಡಿ ಹೋಗಲು ಬಂದಿದ್ದ. ಚೈತ್ರಾ ತನ್ನ ಹುಡುಗನನ್ನು ತಾನೇ ಆರಿಸಿಕೊಂಡಿದ್ದರೂ ಇನ್ನೂ ಮದುವೆಗೆ ಸಮ್ಮತಿಸಿರಲಿಲ್ಲವಾದ್ದರಿಂದ ಅವನಿನ್ನೂ ಆ ಕುರಿತು ಯೋಚಿಸಿಯೇ ಇರಲಿಲ್ಲ. ತನ್ನ ಮನೆಯ ವಿಷಯವನ್ನು ಹೀಗೆಲ್ಲಾ ಹರಡುವ ವೈದೇಹಿ ಬಗ್ಗೆ ಒಂದು ಕ್ಷಣ ಇನ್ನಿಲ್ಲದಷ್ಟು ಸಿಟ್ಟು ಬಂತಾದರೂ ಏನೂ ಹೇಳದೇ ಸುಮ್ಮನೇ ನಕ್ಕ.

‘ಹೋಗ್ಲಿ ಬಿಡು. ಒಳ್ಳೆ ಸುದ್ದಿ ತಂದಿ. ಮೊದ್ಲು ಬಂದವ್ರಿಗೇ ಒಂತೊಟ್ಟು ಹಾಲ್ ಬಿಸ್ಲೀರ್

